**ಕರ್ನಾಟಕ ಸರ್ಕಾರ**
**(ತಾಂತ್ರಿಕ ಶಿಕ್ಷಣ ಇಲಾಖೆ)**

ಸಂಖ್ಯೆ: ಡಿಟಿಇ 01 ನಗದು 2022

ಆಯುಕ್ತರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು- 560 001.
ದಿನಾಂಕ 19.09.2022

**ಸುತ್ತೋಲೆ**

ವಿಷಯ : ಅನುದಾನಿತ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸರ್ಕಾರದ ಅನುಮೋದನೆಗೆ ಒಳಪಟ್ಟಿರುವ ಬೋದಕ / ಬೋದಕೇತರ ಸಿಬ್ಬಂದಿಗಳ ವೇತನ ಬಿಡುಗಡೆಗೆ ಸಂಬಂಧಿಸಿದಂತೆ.

*********

ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಅನುದಾನಿತ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅನುದಾನಿತ ಕೋರ್ಸ್‌ಗಳಡಿ ಸರ್ಕಾರದ ಅನುಮೋದನೆಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ಬೋಧಕ / ಬೋಧಕೇತರ ಸಿಬ್ಬಂದಿಗಳ ವೇತನ ಬಿಡುಗಡೆಗೆ ಸಂಬಂಧಿಸಿದಂತೆ ಖಜಾನೆ-2 ರಡಿ ಮುದ್ರಿತವಾಗುವ ಬಿಲ್ಲುಗಳಿಗೆ ಪ್ರಾಂಶುಪಾಲರ ಸಹಿ ಹಾಗೂ ಮೊಹರು ಅಗತ್ಯವಿರುವುದಾಗಿ ಖಜಾನಾಧಿಕಾರಿಗಳು ಆಕ್ಷೇಪಿಸಿ ಬಿಲ್ಲುಗಳನ್ನು ಖಜಾನೆಯಲ್ಲಿ ಸ್ವೀಕರಿಸುತ್ತಿಲ್ಲ. ಆದುದರಿಂದ ಪ್ರತಿ ಮಾಹೆ ಖಜಾನೆ-2 ಮೂಲಕ ಕೇಂದ್ರ ಕಛೇರಿಯಲ್ಲಿ ಮುದ್ರಿತವಾಗುವ ಬಿಲ್ಲುಗಳಿಗೆ ಸಂಬಂಧಪಟ್ಟ ಅನುದಾನಿತ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳು ಕೇಂದ್ರ ಕಛೇರಿಗೆ ಬಂದು ಮುದ್ರಿತ ಬಿಲ್ಲುಗಳಿಗೆ ಸಹಿ ಮಾಡಲು ಈ ಮೂಲಕ ಸೂಚಿಸಲಾಗಿದೆ. ಬಿಲ್ ಮುದ್ರಿತವಾದ ಮೂರು ದಿನದೊಳಗೆ ಪ್ರಾಂಶುಪಾಲರು ಸಹಿ ಮಾಡಿ ಸಲ್ಲಿಸಲು ಸೂಚಿಸಿದ್ದು, ವಿಳಂಭವಾದಲ್ಲಿ ವೇತನ ಬಿಡುಗಡೆಗೆ ಸಂಬಂಧಪಟ್ಟಂತೆ ಪ್ರಾಂಶುಪಾಲರುಗಳನ್ನೇ ನೇರ ಹೊಣೆಗಾರರಾಗುತ್ತಾರೆಂದು ಈ ಮೂಲಕ ತಿಳಿಸಲಾಗಿದೆ.

**ಆಡಳಿತಾಧಿಕಾರಿ**
**ತಾಂತ್ರಿಕ ಶಿಕ್ಷಣ ಇಲಾಖೆ**

**ರವರಿಗೆ.**

ಪ್ರಾಂಶುಪಾಲರು, ಅನುದಾನಿತ ಪಾಲಿಟೆಕ್ನಿಕ್ ಮತ್ತು ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು

**ಪ್ರತಿ:**

1. ಲೆಕ್ಕಾಧಿಕಾರಿಗಳು (ಬಿಲ್ಸ್) ತಾಂತ್ರಿಕ ಶಿಕ್ಷಣ ಇಲಾಖೆ ಬೆಂಗಳೂರು.
2. ಇ-ಗೌರ್ವನೆನ್ಸ್ ವಿಭಾಗ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು